**ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು**

ಹಾಗೂ

**ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಿಳಾ ಮಹಾವಿದ್ಯಾಲಯ,**

**ಚಿತ್ರದುರ್ಗ (I.Q.A.C)**

ಇವರ ಸಹಯೋಗದೊಂದಿಗೆ ಆಯೋಜಿಸಿರುವ

# "ಐತಿಹಾಸಿಕ ದಾಖಲೆಗಳ
ಮತ್ತು
# ಛಾಯಾ ಚಿತ್ರಗಳ ಪ್ರದರ್ಶನ"

ದಿವ್ಯ ಸಾನಿಧ್ಯ : **ಡಾ. ಶ್ರೀ ಶ್ರೀ ಶಿವಮೂರ್ತಿ ಮುರುಘಾ ಶರಣರು**
ಶ್ರೀ ಮುರುಘಾ ಮಠ, ಚಿತ್ರದುರ್ಗ

ಉದ್ಘಾಟನೆ : **ಡಾ. ಎಸ್. ಅಂಬುಜಾಕ್ಷಿ,** ನಿರ್ದೇಶಕರು (ಪ್ರ)
ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಮುಖ್ಯಅತಿಥಿಗಳು : **ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ**
ಕಾರ್ಯನಿರ್ವಾಹಕ ನಿರ್ದೇಶಕರು (ಶೈಕ್ಷಣಿಕ) ಎಸ್‌ಜೆಎಂ ವಿದ್ಯಾಪೀಠ, ಚಿರ್ತದುರ್ಗ
**ಡಾ. ಈ. ಚಿತ್ರಶೇಖರ್**
ಕಾರ್ಯನಿರ್ವಾಹಕ ನಿರ್ದೇಶಕರು, (ಸಾಮಾನ್ಯ) ಎಸ್‌ಜೆಎಂ ವಿದ್ಯಾಪೀಠ. ಚಿರ್ತದುರ್ಗ

ಪ್ರಾಸ್ತಾವಿಕ ನುಡಿ : **ಪ್ರೊ. ಸಿ. ಬಸವರಾಜಪ್ಪ**
ಪ್ರಾಂಶುಪಾಲರು, ಎಸ್‌ಜೆಎಂ ಮಹಿಳಾ ಮಹಾವಿದ್ಯಾಲಯ, ಚಿತ್ರದುರ್ಗ

**ದಿನಾಂಕ: 17.01.2019 ಸಮಯ ಬೆಳಗ್ಗೆ 10.30ಕ್ಕೆ**
**ಸ್ಥಳ: ಶಿ.ಮು.ಶ ಸಭಾಂಗಣ, ಎಸ್‌ಜೆಎಂ ಡೆಂಟಲ್ ಕಾಲೇಜ್, ಚತ್ರದುರ್ಗ**

## ಸರ್ವರಿಗೂ ಆದರದ ಸ್ವಾಗತ

ದಾಖಲೆಗಳ ಪ್ರದರ್ಶನ
**ದಿನಾಂಕ: 17.01.2019 ರಿಂದ 18.01.2019ರ ವರೆಗೆ**

Scanned with CamScanner

The Karnataka State Archives was established in 1973. It was established with the main intension of protecting and preserving historically important documents.

By "History" we mean the study of man's past. In order to study and write about man's past one requires evidence. Documents play an important role in providing us evidence pertaining to a nation's growth and development. Such documents are available in the Karnataka State Archives. A glimpse of the past can be had through the records that is displayed in the exhibition. For instance one can see relates to the appointment of Sir M. Visvesvaraya as the Dewan of Mysore. The amount of pension that he received on retirement is also displayed. Another interesting record Artist Raja Ravivarma letter, Artist Venkatappa letters and etc.

These documents are exhibited with a view to create awareness about the past history of the State. It is hoped that these documents gives an insight into the past History of Mysore.




ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಹಾಗೂ

ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಿಳಾ ಮಹಾವಿದ್ಯಾಲಯ,

ಚಿತ್ರದುರ್ಗ (I.Q.A.C)

ಇವರ ಸಹಯೋಗದೊಂದಿಗೆ ಆಯೋಜಿಸಿರುವ



# "ಐತಿಹಾಸಿಕ ದಾಖಲೆಗಳ

ಮತ್ತು

# ಛಾಯಾ ಚಿತ್ರಗಳ ಪ್ರದರ್ಶನ"

Scanned with CamSca

ಪತ್ರಾಗಾರ
ಇಲಾಖೆ

**Karnataka State Archives Department, Bangalore**

in association with

**SJM Womens College Chitradurga IQAC in Association with** organ

# Exhibition of Historical Documents and Photographs

Date: 17:01:2019 Time: !0:30 AM

**Place: Shi Mu Sha Auditorium, SJM Dental College**

Devine Presence : Dr Shivamurthy Murugha Sharanaru

(Pontiff, President) Sri Murugha Math

Inauguaration : : DR. S Ambujakshi

Director,Dept of Karnataka State Archives

Chief Guests : Dr G,N, Mallikarjunappa

Executive Director,SJM Vidyapeeta

: Dr.E.Chitrashekar

Executive Director,SJM Vidyapeeta

Key note Address : : Prof. Basavarajappa, C .

Principal, SJM Womens College

PRINCIPAL
S.J.M. Arts College for women
CHITRADURGA - 577 501
Karnataka.

Scanned with CamSca

ಪ್ರಜಾವಾಣಿ ಶುಕ್ರವಾರ • ಜನವರಿ 18, 2019

ಐತಿಹಾಸಿಕ ದಾಖಲೆಗಳನ್ನು ಕಣ್ತುಂಬಿಕೊಂಡ ವಿದ್ಯಾರ್ಥಿನಿಯರು

# ಗಮನ ಸೆಳೆಯುತ್ತಿದೆ ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಐತಿಹಾಸಿಕ ಘಟನಾವಳಿಗಳನ್ನು ಮೆಲುಕು ಹಾಕುವ ಮೂಲಕ ಅವುಗಳನ್ನು ವಿದ್ಯಾರ್ಥಿ ಸಮೂಹಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ದಾಖಲೆಗಳ ಸಮೇತ ಛಾಯಾಚಿತ್ರಗಳು ಇಲ್ಲಿ ಗುರುವಾರ ಅನಾವರಣಗೊಂಡವು.

ರಾಜ್ಯ ಪತ್ರಾಗಾರ ಇಲಾಖೆ ಹಾಗೂ ಮುರುಘರಾಜೇಂದ್ರ ಮಹಿಳಾ ಮಹಾವಿದ್ಯಾಲಯದ ಐಕ್ಯುಎಸಿ ವಿಭಾಗದಿಂದ ಶಿಮುಶ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಐತಿಹಾಸಿಕ ದಾಖಲೆಗಳ ಛಾಯಾಚಿತ್ರ ಪ್ರದರ್ಶನ ಸಾರ್ವಜನಿಕರನ್ನು ಆಕರ್ಷಿಸಿತು.

ವಿಧಾನಸೌಧ ಕಟ್ಟಡ ನಿರ್ಮಾಣಕ್ಕಿಂತ ಮೊದಲ ಸ್ಥೂಲ ನಕ್ಷೆ, ರಾಜ ರವಿವರ್ಮ ಬರವಣಿಗೆ ಶೈಲಿ, 1902ರಲ್ಲಿ ಆನೆಯನ್ನು ಸಾರ್ವಜನಿಕವಾಗಿ ಮಾರಾಟ ಮಾಡಲು ಹೊರಡಿಸಿದ ಸರ್ಕಾರಿ ಆದೇಶ, ಜನರಲ್ ಕೆ.ಎಂ. ಕಾರಿಯಪ್ಪ ಅವರಿಗೆ ಆಗಿನ ಪ್ರಧಾನಿ ಇಂದಿರಾಗಾಂಧಿ ಬರೆದ ಅಭಿನಂದನಾ ಪತ್ರ ಮತ್ತು ಸಹಿಯುಳ್ಳ ಅಪರೂಪದ ಚಿತ್ರಗಳು ಗಮನ ಸೆಳೆದವು.

1914-15ರಲ್ಲಿ ಸಿವಿಲ್ ನ್ಯಾಯಾಧೀಶರಿಗೆ ಕನ್ನಡ ಬಳಕೆ ಕಡ್ಡಾಯ ಎಂಬುದಾಗಿ ನಿರ್ಧರಿಸಿ ಆದೇಶ ನೀಡಿರುವುದು, 1935ರಲ್ಲಿ ಡಿ.ವಿ. ಗುಂಡಪ್ಪ ಅವರು ಪ್ರಿಂಟಿಂಗ್ ಪ್ರೆಸ್ ಪ್ರಾರಂಭಿಸಲು ₹ 6 ಸಾವಿರ ಸಾಲ ಕೋರಿರುವ ಪತ್ರ ಹಾಗೂ ರಾಷ್ಟ್ರಕವಿ ಕುವೆಂಪು ಅವರು ಬಿ. ಚಿಕ್ಕಮುನಿಯಪ್ಪ ಅವರಿಗೆ ಬರೆದ ಅಂಚೆ ಪತ್ರ, ಸಹಿ ನೋಡುಗರಲ್ಲಿ ಅಚ್ಚರಿ ಮೂಡಿಸಿದವು.

ಮೊದಲ ಮಹಾಯುದ್ಧಕ್ಕೆ ಹಣ ನೀಡುವಂತೆ ಬ್ರಿಟಿಷರು ಅಪೀಲು ಮಾಡಿದ ನಂತರ ಮೈಸೂರಿನ ಮಹಾರಾಜರು ₹ 50 ಲಕ್ಷ ಮತ್ತು ಸೈನಿಕರನ್ನು ಯುದ್ಧಕ್ಕೆ ಕಳುಹಿಸಲು ಭರವಸೆ ನೀಡಿದ ಪತ್ರ, 1912 ರಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಅವರು ಮೈಸೂರಿನ ದಿವಾನರಾಗಿ ಅಧಿಕಾರ ಪಡೆದದ್ದು ಹಾಗೂ 1919ರಲ್ಲಿ ಅವರಿಗೆ ಪಿಂಚಣಿ ನೀಡಿರುವ ಕುರಿತ ಆದೇಶಪತ್ರ ಹೇಗಿತ್ತು ಎಂಬುದನ್ನು ತೋರಿಸಿದ ಪ್ರದರ್ಶನ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿತು.

1922 ರ ಸೆ. 4ರಂದು ಮೈಸೂರಿಗೆ ಭೇಟಿ ನೀಡುವ ಕುರಿತು ಡಾ. ರವೀಂದ್ರನಾಥ ಟ್ಯಾಗೋರ್ ಅವರು ಕಳುಹಿಸಿದ್ದ ಟೆಲಿಗ್ರಾಂನ ವಿವರ, 1931ರ ಎರಡು ಆಣೆಯಿಂದ 1957 ರವರೆಗಿನ ₹ 2 ಸೇರಿ ವಿವಿಧ ಬೆಲೆಯ ಸ್ಟ್ಯಾಂಪ್‌ಗಳು, 1962ರಲ್ಲಿ ನಿಜಲಿಂಗಪ್ಪ ಅವರ ಸಂಪುಟದಲ್ಲಿದ್ದ ಸಚಿವರು ಸೇರಿ ಅನೇಕ ಮಾಹಿತಿ ವಿದ್ಯಾರ್ಥಿನಿಯರನ್ನು ಆಕರ್ಷಿಸಿದವು.

ಮೈಸೂರು ಮಹಾರಾಜರ ಆಳ್ವಿಕೆ, ಮಹಾತ್ಮ ಗಾಂಧಿ ಅವರು ಕರ್ನಾಟಕಕ್ಕೆ ಬಂದಿದ್ದಾಗ ತೆಗೆದಿದ್ದ ಅವರ ಚಿತ್ರ, ಟಿ.ಬಿ. ಕೇಶವರಾವ್ ಅವರಿಗೆ ಬರೆದ ಪತ್ರದಲ್ಲಿ ಅವರ ಸಹಿ ಹೀಗೆ ಇನ್ನೂ ಅನೇಕ ಅಪರೂಪದ ಉಪಯುಕ್ತ ಛಾಯಾಚಿತ್ರಗಳನ್ನು ಎರಡು ದಿನಗಳ ಪ್ರದರ್ಶನದಲ್ಲಿ ಇಡಲಾಗಿದೆ.

ಎಸ್‌ಜೆಎಂ ವಿದ್ಯಾಪೀಠದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ.ಜಿ.ಎನ್. ಮಲ್ಲಿಕಾರ್ಜುನಪ್ಪ, ಡಾ. ಚಿತ್ರಶೇಖರ್, ಇತಿಹಾಸ ಸಂಶೋಧಕ ಪ್ರೊ.ಬಿ. ರಾಜಶೇಖರಪ್ಪ, ಎಸ್‌ಜೆಎಂ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ.ಸಿ. ಬಸವರಾಜಪ್ಪ ಅವರೂ ಇದ್ದರು.

**ಮುಖ್ಯಾಂಶಗಳು**

- ಗಮನಸೆಳೆದ ಮಹನೀಯರ ಪತ್ರಗಳು ಮತ್ತು ಸಹಿ
- ಆಣೆ ಸೇರಿ ವಿವಿಧ ಬೆಲೆಯ ಸ್ಟ್ಯಾಂಪ್‌ಗಳ ಪ್ರದರ್ಶನ
- ಪ್ರದರ್ಶನ ವೀಕ್ಷಿಸಲು ಇಂದು ಕೂಡ ಅವಕಾಶ

ಇತಿಹಾಸದ ಜ್ಞಾನ ಬಲ್ಲವರು ಮಾತ್ರ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯ. ಐತಿಹಾಸಿಕ ಘಟನಾವಳಿ ತಿಳಿಯಲು ಎಲ್ಲರೂ ಉತ್ಸುಕರಾಗಬೇಕು.

**ಮಂಜುನಾಥ್**, ರಾಜ್ಯ ಪತ್ರಾಗಾರ ಇಲಾಖೆಯ ಸಹಾಯಕ ಪತ್ರಾಗಾರ

ಇತಿಹಾಸ ವಿದ್ಯಾರ್ಥಿಗಳಿಗೆ ಈ ಛಾಯಾಚಿತ್ರ ಪ್ರದರ್ಶನವು ತುಂಬಾ ಉಪಯುಕ್ತವಾಗಿದೆ. ಇದೇ ವಿಷಯದಲ್ಲೇ ಏನಾದರೂ ಸಾಧಿಸಬೇಕು ಎಂಬ ಛಲವನ್ನು ತಂದಿದೆ.

**ಶ್ವೇತಾ**, ಎಸ್‌ಜೆಎಂ ಕಾಲೇಜು ವಿದ್ಯಾರ್ಥಿನಿ



ಚಿತ್ರದುರ್ಗದಲ್ಲಿ ಗುರುವಾರ ಪ್ರಾರಂಭವಾದ ಐತಿಹಾಸಿಕ ದಾಖಲೆಗಳ ಛಾಯಾಚಿತ್ರ ಪ್ರದರ್ಶನ ವೀಕ್ಷಿಸುತ್ತಿರುವ ಶಿವಮೂರ್ತಿ ಮುರುಘಾ ಶರಣರು

## ‘ಪುರಾಣ ಇತಿಹಾಸವಲ್ಲ’

ಐತಿಹಾಸಿಕ ಕೋಟೆ ನಗರಿ ಚಿತ್ರದುರ್ಗವೂ ಇತಿಹಾಸದ ಕಣಜವಾಗಿದೆ ಎಂದು ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

‘ಪುರಾಣವನ್ನು ಇತಿಹಾಸವಾಗಿ, ಇತಿಹಾಸವನ್ನು ಪುರಾಣವಾಗಿ ಬಿಂಬಿಸಲಾಗುತ್ತಿದೆ. ಆದರೆ, ಪುರಾಣ ಎಂದಿಗೂ ಇತಿಹಾಸ ಆಗಲ್ಲ. ಅದು ಕೇವಲ ಕಲ್ಪನಾ ಲೋಕ’ ಎಂದರು.

‘ಇತಿಹಾಸ ಸತ್ಯಕ್ಕೆ ಸಮೀಪವಾಗಿದೆ. ದಾಖಲೆ ಹಾಗೂ ವಾಸ್ತವಿಕ ಸಂಗತಿಗಳ ಆಧಾರದ ಮೇಲೆ ಅಧ್ಯಯನ ಮತ್ತು ಸಂಶೋಧನೆ ನಡೆಯುತ್ತದೆ. ಅದಕ್ಕಾಗಿ ಇದಕ್ಕೆ ಗಟ್ಟಿಯಾದ ನೆಲೆ ಇದೆ’ ಎಂದು ಹೇಳಿದರು.

‘ಇತಿಹಾಸ ನಿರ್ಮಿಸಲು ಎಲ್ಲರಿಗೂ ಸಾಧ್ಯವಿಲ್ಲ. ಆದರೆ, ಪ್ರತಿಯೊಬ್ಬರಿಗೂ ಅವಕಾಶವಿದೆ. ಇದನ್ನು ಯಾರು ಚೆನ್ನಾಗಿ ಅರ್ಥೈಸಿಕೊಳ್ಳಲು ಮುಂದಾಗುತ್ತಾರೋ ಅವರು ಸಂಪನ್ಮೂಲ ವ್ಯಕ್ತಿಗಳಾಗುತ್ತಾರೆ’ ಎಂದರು.

Dr Shivamurthy Murugha Sharanaru said it is not possible to make myths history but it is regrettable that the growth that some people are turning into history is regrettable.

The State Archives Department, in association with the Bangalore and SJM Women's College, held a two-day exhibition of historical documents and photographs on Thursday at the Sri Shi Mu Sha Auditorium of SJM Dental College in the city.

PRINCIPAL
S.J.M. Arts College for women
CHITRADURGA - 577 501
Karnataka.

Scanned with CamScanner

ಐತಿಹಾಸಿಕ ದಾಖಲೆಗಳ – ಛಾಯಾಚಿತ್ರ ಪ್ರದರ್ಶನ | ವಾಸ್ತವಿಕ ನೆಲಗಟ್ಟಿನ ಮೇಲೆ ಚರಿತ್ರೆ ಶೋಧಿಸಿ

# ಪುರಾಣ ಇತಿಹಾಸವಾಗಿಸುವ ಸಾಹಸ ಸಲ್ಲದು

■ ವಿಕ ಸುದ್ದಿಲೋಕ ಚಿತ್ರದುರ್ಗ

ಪುರಾಣ ಇತಿಹಾಸ ಆಗಲಿಕ್ಕೆ, ಇತಿಹಾಸ ಪುರಾಣ ಆಗಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಕೆಲವರು ಇತಿಹಾಸವನ್ನು ಪುರಾಣವನ್ನಾಗಿ ಬದಲಾಯಿಸುತ್ತಿರುವ ಬೆಳವಣಿಗೆ ವಿಷಾದನೀಯ ಸಂಗತಿ ಎಂದು ಮುರುಘಾಮಠದ ಡಾ.ಶಿವಮೂರ್ತಿ ಮುರುಘಾ ಶರಣರು ಬೇಸರ ವ್ಯಕ್ತಪಡಿಸಿದರು.

ನಗರದ ಎಸ್‌ಜೆಎಂ ಡೆಂಟಲ್ ಕಾಲೇಜಿನ ಶಿಮುಶ ಸಭಾಂಗಣದಲ್ಲಿ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು ಹಾಗೂ ಮುರುಘ ರಾಜೇಂದ್ರ ಮಹಿಳಾ ಮಹಾವಿದ್ಯಾಲಯ ಸಹಯೋಗದಲ್ಲಿ ಎರಡು ದಿನಗಳ ಕಾಲ ಆಯೋಜಿಸಿರುವ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರ. ಪ್ರದರ್ಶನಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

ಪುರಾಣ ಒಂದು ಕಾಲ್ಪನಿಕ ಲೋಕ, ಅದನ್ನು ಯಾವ ರೀತಿಯಾದರೂ ಕಲ್ಪನೆ, ಊಹೆ ಮಾಡಿಕೊಳ್ಳಬಹುದು. ಆದರೆ ಇತಿಹಾಸಕ್ಕೆ ಸ್ಪಷ್ಟತೆ, ನಿಖರತೆ, ಕಾಲದ ಚೌಕಟ್ಟು ಇರುತ್ತದೆ. ಇತಿಹಾಸ ಎಲ್ಲದಕ್ಕೂ ಮುಖ್ಯವಾಗಿ ಸತ್ಯಕ್ಕೆ ಸಮೀಪ ಆಗಿರುತ್ತದೆ ಎಂದರು.

ಸತ್ಯ ಹಾಗೂ ಗಟ್ಟಿ ನೆಲೆಯ ಮೇಲೆ ನಿಂತಿರುವ ಇತಿಹಾಸ ಅರಿಯಬೇಕು, ಅಧ್ಯಯನ ಮಾಡಬೇಕು .ಹಾಗೂ ಇತಿಹಾಸ ನಿರ್ಮಿಸಬೇಕು. ಇತಿಹಾಸದ ಬಗ್ಗೆ ಸಾಧನೆ, ಶೋಧನೆ, ಸಂಶೋಧನೆ ಮಾಡಿದವರು, ಬೇರೆಯವರಿಗೆ ಇತಿಹಾಸ ಕಟ್ಟಿಕೊಡುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಚಿತ್ರದುರ್ಗ ಇತಿಹಾಸದ ಕಣಜ. ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಇದರ ಜತೆ ವಿದ್ಯಾರ್ಥಿಗಳು ಜಗತ್ತಿನ ಇತಿಹಾಸ ಅರಿಯುವ ಕೆಲಸ ಮಾಡಬೇಕು. ಡಾ.ಬಿ.ರಾಜಶೇಖರಪ್ಪ ಅವರು ಇತಿಹಾಸದ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಅವರು ನಮ್ಮ ಸಮಾಜದ ಸಂಪನ್ಮೂಲ ವ್ಯಕ್ತಿ. ಇವತ್ತು ನಮ್ಮ ದೇಶಕ್ಕೆ ಸಂಪನ್ಮೂಲ ವ್ಯಕ್ತಿಗಳು ಬೇಕು. ಪ್ರತಿಯೊಬ್ಬರೂ ಸಂಪನ್ಮೂಲ ವ್ಯಕ್ತಿಯಾಗಬೇಕು. ನಮ್ಮ ದೇಶ, ಸಮಾಜಕ್ಕೆ ಈ ರೀತಿಯ ಸಂಪನ್ಮೂಲ ವ್ಯಕ್ತಿಗಳು ಬೇಕು. ಸಂಪನ್ಮೂಲ ವ್ಯಕ್ತಿಗಳನ್ನು ಸಮಾಜ ಹುಡುಕಿಕೊಂಡು ಬರುತ್ತದೆ ಎಂದರು.

ಇತಿಹಾಸ ನಿರ್ಮಿಸಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ, ಆದರೆ ಪ್ರತಿಯೊಂದು ಕ್ಷೇತ್ರದಲ್ಲೂ ಎಲ್ಲರಿಗೂ ಅವಕಾಶಗಳಿವೆ. ಪ್ರತಿದಿನ ಈ ಜಗತ್ತಿನಲ್ಲಿ ನಾನಾ ವಿಧದ ಸಾಹಸಗಳನ್ನು ಮಾಡುವವರು ಇದ್ದಾರೆ. ಬಹುತೇಕರಿಗೆ ಸಾಹಸ ಮಾಡುವ ಶಕ್ತಿ ಇದೆ. ಪ್ರತಿಯೊಬ್ಬರೂ ಇತಿಹಾಸ ನಿರ್ಮಾಣ ಮಾಡುವ ವ್ಯಕ್ತಿಗಳಾದರೆ ಭಾರತದ ಇತಿಹಾಸ ಮತ್ತಷ್ಟು ಬಲಿಷ್ಠ ಆಗುತ್ತದೆ ಎಂದು ಹೇಳಿದರು.



ಚಿತ್ರದುರ್ಗ ಎಸ್‌ಜೆಎಂ ಡೆಂಟಲ್ ಕಾಲೇಜಿನ ಶಿಮುಶ ಸಭಾಂಗಣದಲ್ಲಿ ಆಯೋಜಿಸಿರುವ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರ ಪ್ರದರ್ಶನವನ್ನು ಡಾ.ಶಿವಮೂರ್ತಿ ಮುರುಘಾ ಶರಣರು ವೀಕ್ಷಿಸಿದರು.

ಬೆಂಗಳೂರಿನ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಸಹಾಯಕ ಪತ್ರಪಾಲಕ ಎಚ್.ಎಲ್. ಮಂಜುನಾಥ್ ಮಾತನಾಡಿ, ವಿದ್ಯಾರ್ಥಿಗಳು, ಉಪಧ್ಯಾಯರು, ಸಂಶೋಧಕರಿಗೆ ಇತಿಹಾಸ ಅರಿಯಲಿಕ್ಕೆ, ಇತಿಹಾಸ ಸಂಶೋಧನೆ ಮಾಡಲಿಕ್ಕೆ ಇದು ತುಂಬಾ ಸಹಕಾರಿ ಆಗಲಿದೆ. 1881ರಿಂದ 1973ರವರೆಗಿನ ಸುಮಾರು 56 ಅತ್ಯಮೂಲ್ಯ ಚಾರಿತ್ರಿಕ ದಾಖಲೆ ಪ್ರದರ್ಶನಕ್ಕೆ ಇಡಲಾಗಿದೆ ಎಂದರು.

ರಾಜ್ಯ ಪತ್ರಾಗಾರ ಇಲಾಖೆಯು ಸುಮಾರು 25 ಲಕ್ಷಕ್ಕೂ ಹೆಚ್ಚು ಪುಟಗಳ 150 ವರ್ಷಗಳ ಚಾರಿತ್ರಿಕ ದಾಖಲೆಗಳನ್ನು ಇಲಾಖೆ ವೆಬ್ ಸೈಟ್‌ನಲ್ಲಿ 'ಅಪ್‌ಲೋಡ್' ಮಾಡಲಾಗಿದೆ. ಮೋಡಿ ಲಿಪಿಯಲ್ಲಿರುವುದನ್ನು ಕನ್ನಡಕ್ಕೆ ಭಾಷಾಂತರಿಸಿ ಸುಮಾರು 50 ಸಾವಿರದಷ್ಟು ಪುಟಗಳ ದಾಖಲೆಗಳನ್ನು ಕೂಡ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಲಾಗಿದೆ. ಇತಿಹಾಸ ವಿದ್ಯಾರ್ಥಿಗಳು, ಸಂಶೋಧಕರು ಇದರ ಪ್ರಯೋಜನ ಪಡೆಯಬಹುದು ಎಂದರು.

ಎಸ್‌ಜೆಎಂ ಮಹಿಳಾ ಕಾಲೇಜಿನ ಪ್ರಾಚಾರ್ಯ ಪ್ರೊ.ಸಿ.ಬಸವರಾಜಪ್ಪ ಪ್ರಸ್ತಾವಿಕವಾಗಿ ಮಾತನಾಡಿ, ಎರಡು ದಿನಗಳ ಕಾಲ ಆಯೋಜಿಸಿರುವ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರಗಳ ಪ್ರದರ್ಶನವನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು. ನಮ್ಮ ಕಾಲೇಜು ನ್ಯಾಕ್‌ನಲ್ಲಿ ಎರಡು ಬಾರಿ ಬಿ ಗ್ರೇಡ್ ಪಡೆದುಕೊಂಡಿದೆ. ಮುಂದಿನ ಬಾರಿ ಅದಕ್ಕಿಂತಲೂ ಮೇಲೆ ಹೋಗಲು ಪ್ರಯತ್ನಿಸುತ್ತಿದ್ದೇವೆ. ನಮ್ಮ ಕಾಲೇಜಿಗೆ ಈ ವರ್ಷ ಎರಡು ರ್‍ಯಾಂಕ್‌ಗಳು ಬಂದಿವೆ ಎಂದು ಸಂತಸ ವ್ಯಕ್ತಪಡಿಸಿದರು.

ಎಸ್‌ಜೆಎಂ ವಿದ್ಯಾಪೀಠದ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಜಿ.ಎನ್.ಮಲ್ಲಿಕಾರ್ಜುನಪ್ಪ, ಇತಿಹಾಸ ಸಂಶೋಧಕ ಡಾ.ಬಿ. ರಾಜಶೇಖರಪ್ಪ, ಎಸ್‌ಜೆಎಂ ದಂತ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಗೌರಮ್ಮ, ಎಸ್‌ಜೆಎಂ ಕಾನೂನು ಕಾಲೇಜು ಪ್ರಾಚಾರ್ಯ ವಿಶ್ವನಾಥ್, ಹಿರಿಯ ಚಿತ್ರ...

## ಪತ್ರಾಗಾರ ಇಲಾಖೆ ಭಂಡಾರ

ಸುದ್ದಿಗಾರರ ಜತೆ ಇತಿಹಾಸ ಸಂಶೋಧಕ ಡಾ. ಬಿ.ರಾಜಶೇಖರಪ್ಪ ಮಾತನಾಡಿ, ಪತ್ರಾಗಾರ ಇಲಾಖೆಯು ಲಕ್ಷಗಟ್ಟಲೆ ಐತಿಹಾಸಿಕ ಪತ್ರ, ದಾಖಲೆ ಸಂಗ್ರಹಿಸಿ ಇಟ್ಟುಕೊಂಡಿರುವ ಒಂದು ಭಂಡಾರ. ಟಿಪ್ಪು, ಬ್ರಿಟಿಷ್ ಕಾಲದಿಂದ ಹಿಡಿದು ಚಾಮರಾಜ ಒಡೆಯರ್ ಕಾಲದವರೆಗಿನ ದಾಖಲೆ ಸಂಗ್ರಹಿಸಿಕೊಂಡಿದ್ದಾರೆ. ಶೃಂಗೇರಿಮಠದ ಸೇರಿದಂತೆ ನಾನಾ ಮಠಗಳ ದಾಖಲೆಗಳಿವೆ. ಇವು ಪ್ರದರ್ಶನ ಹಾಗೂ ದರ್ಶನಕ್ಕೆ ಯೋಗ್ಯವಾದವು. ಕನ್ನಡ ಮೋಡಿ ಲಿಪಿ ಓದುವುದರಲ್ಲಿ ರಾಜ್ಯದ ಕೆಲವೇ ಕೆಲವರಲ್ಲಿ ನಾನೂ ಒಬ್ಬ. ಕನ್ನಡ ಮೋಡಿ ಲಿಪಿಗಳು ಬಹುಸಂಖ್ಯೆಯಲ್ಲಿವೆ. ಮುರುಘಾ ಮಠದಲ್ಲೂ ಅಸಂಖ್ಯ ಪತ್ರಗಳಿದ್ದು ಅವುಗಳು ಕನ್ನಡ ಮೋಡಿ ಲಿಪಿಯಲ್ಲಿವೆ. ಜೋಡಿಸಿದ ರೂಪದಲ್ಲಿರುವ ಮೋಡಿ ಲಿಪಿಯ ಪತ್ರಗಳನ್ನು ಸುಲಭವಾಗಿ ಓದಲು ಸಾಧ್ಯವಾಗುವುದಿಲ್ಲ ಎಂದರು.

## ದಾಖಲೆಗಳ ಛಾಯಾಚಿತ್ರ

ಬ್ರಿಟಿಷ್ ಕಮಿಷನರ್‌ರವರು ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರಿಗೆ ಮೈಸೂರು ಸರಕಾರದ ಅಧಿಕಾರವನ್ನು ಹಸ್ತಾಂತರ ಮಾಡಿರುವ ಆದೇಶ ಪ್ರತಿಗಳು, ಖ್ಯಾತ ಚಿತ್ರಕಲಾವಿದ ರಾಜ ರವಿವರ್ಮ ಹಾಗೂ ಕಲಾವಿದ ವೆಂಕಟಪ್ಪ ಅವರ ಅತ್ಯಮೂಲ್ಯ ಕೈಬರಹದ ಪ್ರತಿಗಳು, ಮಾಜಿ ಮುಖ್ಯಮಂತ್ರಿ ದೇವರಾಜ ಅರಸುರವರ ಮಂತ್ರಿಮಂಡಲ, ಸಚಿವ ಸಂಪುಟದ ವಿವರ, ಜಯಚಾಮರಾಜ ಒಡೆಯರ್‌ರವರ ಸಿಂಹಾಸನ, ದಸರಾ ದರ್ಬಾರ್, ಮೈಸೂರು ದಿವಾನರನ್ನಾಗಿ ಸ್ವಾಮಿ ವಿವೇಕಾನಂದ ಅವರನ್ನು ನೇಮಿಸಿ ಆದೇಶ ಹೊರಡಿಸಿದ ಪ್ರತಿ, ಮೈಸೂರು ದಿವಾನರನ್ನಾಗಿ ಸರ್.ಎಂ.ವಿಶ್ವೇಶ್ವರಯ್ಯರನ್ನು ನೇಮಿಸಿದ ಆದೇಶ ಹಾಗೂ ನಿವೃತ್ತಿ ಹೊಂದಿದ ನಂತರ ಅವರು ಪಡೆಯುತ್ತಿದ್ದ ಪಿಂಚಣಿ ಮೊತ್ತ 1250 ರೂ. ಇಂತಹ ಅತ್ಯಮೂಲ್ಯ ದಾಖಲೆಗಳ ಛಾಯಾಚಿತ್ರ ಇಡಲಾಗಿದೆ.

PRINCIPAL
S.J.M. Arts College for Women

Prajavani Kannada Daily